ಎಂ ವಿ ಸಿ ಸಂಖ್ಯೆ 91/2022

ಪಿ ಡಬ್ಲ್ಯೂ-1

**(ದಿನಾಂಕ 24.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎ ಎಂ ವಿ ವಕೀಲರಿಂದಃ-**

ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತದ ನಂತರ ನಾನು ಎಸ್ ಎಸ್ ಐ ಎಂ ಎಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಎರಡುವರೆ ತಿಂಗಳು ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನನಗೆ ಚಿಕಿತ್ಸೆ ಕೊಟ್ಟ ವೈದ್ಯರು ನಿತೀನ್ ಕುಮಾರ್. ಎರಡುವರೆ ತಿಂಗಳು ಚಿಕಿತ್ಸೆ ಪಡೆದ ಬಗ್ಗೆ ಡಿಸ್ ಚಾರ್ಜ ಕಾರ್ಡ ನೀಡಿರುತ್ತಾರೆ ಎಂದರೆ ಸರಿ. ಡಿಸ್ ಚಾರ್ಜ ಕಾರ್ಡನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಡಿಸ್ ಚಾರ್ಜ ಸಮ್ಮರಿ ನಾನು ಹಾಜರುಪಡಿಸಿಲ್ಲಾ ಎಂದರೆ ಸರಿ. ಬಿಲ್ ನಂಬರ 89 ಗೆ ವೈದ್ಯರ ಸಹಿ ಆಸ್ಪತ್ರೆ ಸೀಲ್ ಇರುವುದಿಲ್ಲಾ ಎಂದರೆ ಸರಿ. ಎಸ್ ಎಸ್ ಐ ಎಂ ಎಸ್ ಆಸ್ಪತ್ರೆಯಲ್ಲಿ ತೊಡೆ ಮತ್ತು ಕಾಲಿಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ರಾಡ್ ಅಳವಡಿಸಿರುತ್ತಾರೆ. ಕೈ ಕಾಲು ಎಲುಬು ಮೂಳೆ ಮುರಿತಕ್ಕೆ ಕೀಲು ಮತ್ತು ಮೂಳೆ ತಜ್ಞರು ಶಸ್ತ್ರ ಚಿಕಿತ್ಸೆ ನಡೆಸುತ್ತಾರೆ ಎಡಿ ಡಾಃ ನಿತೀನ್ ಪ್ಲಾಸ್ಟಿಕ್ ಸರ್ಜನ್ ಎಂದರೆ ಸರಿ. ನವೋದಯ ಆಸ್ಪತ್ರೆಯಲ್ಲಿ ಕೂಡ ಚಿಕಿತ್ಸೆ ಪಡದುಕೊಂಡಿರುತ್ತೇನೆ. ನವೋದಯ ಆಸ್ಪತ್ರೆಯಲ್ಲಿ ರಾಡ್ ತೆಗೆಸಿರುತ್ತೇನೆ. ಅಲ್ಲಿ ಎರಡು ದಿನ ಚಿಕಿತ್ಸೆ ಪಡೆದಿರುತ್ತೆನೆ. ನವೋದಯ ಆಸ್ಪತ್ರೆಯ ಡಿಸ್ ಚಾರ್ಜ ಸಮ್ಮರಿ ಮತ್ತು ಕೇಸ್ ಶೀಟ್ ಹಾಜರುಪಡಿಸುತ್ತೇನೆ. ನವೋದಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಿನಾಂಕ ನೆನಪು ಇಲ್ಲಾ. ನವೋದಯ ಆಸ್ಪತ್ರೆ ಡಿಸ್ ಚಾರ್ಜ ಸಮ್ಮರಿ ನಿ ಪಿ 10 ಡೇಟ್ ಆಫ್ ಅಡ್ಮೀಷನ್ ದಿನಾಂಕ 13.07.2021 ಅಂತಾ ಇರುತ್ತದೆ ಎಂದರೆ ಸರಿ. ಡಿಸ್ ಚಾರ್ಜ ಆದ ಬಗ್ಗೆ ಅದರಲ್ಲಿ ನಮೂದು ಇಲ್ಲಾ ಎಂದರೆ ಸರಿ. ನವೋದಯ ಆಸ್ಪತ್ರೆಯವರು ಬಿಲ್ ಗಳನ್ನು ಸೃಷ್ಟಿಸಿ ಹೆಚ್ಚಿಗೆ ನಮೂದಿಸಿ ಕೊಡುತ್ತಾರೆ ಅಂತಾ ಗೌರವಾನ್ವಿತ ಉಚ್ಚ ನ್ಯಾಯಾಲಯದವರು ಅವರ ವಿರುದ್ಧ structure ಹೊರಡಿಸಿದ್ದು ನಾನು ಅವರಿಂದ

ಖೊಟ್ಟಿ ಆಗಿ ಬಿಲ್ಲುಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರು ನೀಡಿರುವ ಚಿಕಿತ್ಸೆಗೆ ಸಂಪೂರ್ಣ ಸ್ಪಂದಿಸಿರುತ್ತೇನೆ ಎಂದರೆ ಸರಿ. ನಾನು ಈಗಲೂ ಮೊದಲಿ ನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಪುನಃ ನಾನು ಡಾಃ ನಿತೀನ್ ಹತ್ತಿರ ವಾರಕ್ಕೊಮ್ಮೆ ಹೋಗುತ್ತಿದ್ದೇನೆ. ಬಲಗಾಲನ್ನು ಹೊರತುಪಡಿಸಿ ದೇಹದ ಬೇರೆ ಯಾವುದೇ ಭಾಗಕ್ಕೆ ಮೂಳೆ ಮುರಿತ ಆಗಿಲ್ಲಾ ಎಂದರೆ ಕೈ ಗೆ ತೊಡೆಗೆ ಆಗಿರುತ್ತದೆ. ಕೈ ಗೆ ತೊಡೆಗೆ ಆದ ಗಾಯಕ್ಕೆ ಔಷದೋಪಚಾರದ ಚಿಕಿತ್ಸೆ ಕೊಟ್ಟಿರುತ್ತಾರೆ. ನಿ ಪಿ 18 ಎಸ್ ಐ ಎಂ ಎಸ್ ಆಸ್ಪತ್ರೆಯಿಂದ ತಂದಿರುತ್ತೇನೆ. ನಿ ಪಿ 18 ರ ಪ್ರಕಾರ ನನಗೆ ಅಂಗನ್ಯೂನ್ಯತೆ ಇಲ್ಲಾ ಎಂದರೆ ಸರಿಯಲ್ಲ. ಕೀಲು ಮತ್ತು ಮೂಳೆ ತಜ್ಞರ ಹತ್ತಿರ ಚಿಕಿತ್ಸೆ ಪಡೆಯುದೇ ಪ್ಲಾಸ್ಟಿಕ್ ಸರ್ಜನ್ ಹತ್ತಿರ ಖೊಟ್ಟಿ ಆಗಿ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಕೀಲು ಮತ್ತು ಮೂಳೆ ತಜ್ಞರು ಮಾತ್ರ ಅಂಗ ನ್ಯೂನ್ಯತೆ ಕೊಡಲು ಸಮರ್ಥರು ಎಂದರೆ ಸರಿಯಲ್ಲ. ಬಿಲ್ ನಂಬರ 6, 7, 8, 14, 33, 49, 51, 57, 64, 81, 102, 103, 104, 113 ಇವುಗಳು ಮುಂಗಡ ಬಿಲ್ ಗಳು ಎಂದರೆ ಸರಿ. ಆಸ್ಪತ್ರೆಯ ಖರ್ಚಿನ ಬಗ್ಗೆ ಅಡ್ವಾನ್ಸ ಬಿಲ್ಲನ್ನು ಬಿಟ್ಟು ಸರಿಯಾಗಿ ಪಟ್ಟಿ ಮಾಡಿ ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ಎಸ್ ಎಸ್ ಐ ಎಂ ಎಸ್ ಆಸ್ಪತ್ರೆಯಲ್ಲಿ ನನಗೆ ಟೋಟಲ್ ಬಿಲ್ 66,849-00 ರೂ ಆಗಿತ್ತು ಎಂದರೆ ಸರಿ. ಅದರಲ್ಲಿ 6,600-00 ರೂ ರಿಯಾಯ್ತಿ ಕೊಟ್ಟಿರುತ್ತಾರೆ ಎಂದರೆ ಸರಿ. ಅದರಲ್ಲಿ ಅಡ್ವಾನ್ಸ ಬಲ್ ಕೂಡ ನಮೂದು ಇದೆ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯಲು ಸಂಬಂಧ ಪಡದ ಬಿಲ್ಲುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಸಂಧರ್ಭದಲ್ಲಿ ನಾನು ಬೈಕ್ ಚಲಾಯಿಸುತ್ತಿದ್ದೆ ಎಂದರೆ ಸರಿ. ನನಗೆ ಡಿ ಎಲ್ ಇರುವುದಿಲ್ಲಾ. ಡಿ ಎಲ್ ಇಲ್ಲದೇ

ಎಂ ವಿ ಸಿ ಸಂಖ್ಯೆ 91/2022

ಪಿ ಡಬ್ಲ್ಯೂ-1

ವಾಹನ ಚಲಾಯಿಸಲು ಬರುವುದಿಲ್ಲಾ ಎಂದರೆ ಸರಿ. ನನ್ನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಪರಿಹಾರ ಪಡೆಯಲು ಲಾರಿಯನ್ನು ಸಿಕ್ಕಿಸಿರುತ್ತೇವೆ ಎಂದರೆ ಸರಿಯಲ್ಲ. ಲಾರಿ ಕರ್ನಾಟಕದಲ್ಲಿ ಓಡಾಡಲು ಪರ್ಮಿಟ್ ಇಲ್ಲದಿದ್ದ ಕಾರಣ 3ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲಾ ಎಂದರೆ ಸರಿಯಲ್ಲ. ಲಾರಿ ಚಾಲಕನಿಗೆ ಕಾನೂನು ಬದ್ದ ಡಿ ಎಲ್ ಇಲ್ಲದಿದ್ದ ಕಾರಣ ಲಾರಿ ಮಾಲೀಕರು ಪರಿಹಾರ ಕೊಡಲು ಬಾದ್ಯಸ್ಥರು ಎಂದರೆ ಸರಿಯಲ್ಲ. ಲಾರಿಗೆ 3ನೇ ಎದುರುದಾರರು ವಿಮೆ ಕೊಟ್ಟಿಲ್ಲದ ಕಾರಣ ಪರಿಹಾರ ಕೊಡಲು 3ನೇ ಎದುರುದಾರರು ಬಾದ್ಯಸ್ದರಲ್ಲಾ ಎಂದರೆ ಸರಿಯಲ್ಲ. ಬೈಕ್ ನ ಮಾಲೀಕ ಮತ್ತು ವಿಮಾದಾರರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇಲ್ಲಾ ಸರಿ. ನನಗೆ ತಿಂಗಳಿಗೆ 20 ಸಾವಿರ ಆದಾಯ ಇರುವ ಬಗ್ಗ ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿರುವುದಿಲ್ಲಾ ಎಂದರೆ ಸರಿ. ಗ್ರಾಮ ಪಂಚಾಯತಿ ಲೈಸೆನ್ಸನ್ನು ಅವರೊಂದಿಗೆ ಶಾಮೀಲಾಗಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈಗ ನನ್ನ ಹೆಸರಿನಲ್ಲಿ ಯಾವುದೇ ಲೈಸೆನ್ಸ ಇರುವುದಿಲ್ಲ. ಪರಿಹಾರ ಪಡೆಯಲು ನ್ಯಾಯಾಲಯ್ಕೆ ಸುಳ್ಳು ದಾಖಲೆಯನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.